EMAIL : dairyadadaari@gmail.com ಸಂಪುಟ: 01 ಸಂಚಿಕೆ: 141
ಬೆಲೆ ರೂ : 2.00
ರಾಯಚೂರು
ಪುಟ: 4
ನಿಮ್ಮ ನಂಬಿಕೆಯ ಧ್ವನಿ
# ಧೈರ್ಯದ ದಾರಿ
DAIRYADA DAARI NEWS PAPER
ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ
Cell : 6360866626, 9036887793
KANNADA DAILY NEWS PAPER
ಕನ್ನಡ ದಿನಪತ್ರಿಕೆ
DAIRYADA DAARI
RNI NO: KNKAN/25/A2795
ಮಂಗಳವಾರ: 12–05–2026

## ಕೆಪಿಎಸ್‌ಸಿ ನಿರುದ್ಯೋಗಿಗಳ ಪಾಲಿನ ಪಾಪಾಸ್‌ಕಳ್ಳಿಯಾಗಿದೆ ಬಿ.ವೈ.ವಿ ಅಸಮಾಧಾನ

**ಬೆಂಗಳೂರು,ಮೇ 11–** ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕ ಲೋಕ ಸೇವಾ ಆಯೋಗ (ಕೆಪಿಎಸ್‌ಸಿ) ಅರ್ಹ ಪ್ರತಿಭಾವಂತ ನಿರುದ್ಯೋಗಿಗಳ ಪಾಲಿಗೆ ಕಲ್ಪವೃಕ್ಷವಾಗುವ ಬದಲು ಪಾಪಾಸುಕಳ್ಳಿಯಾಗಿ ಲಕ್ಷಾಂತರ ನಿರುದ್ಯೋಗಿಗಳ ಭವ್ಯ ಭವಿಷ್ಯವನ್ನು ಅತಂತ್ರ ಸ್ಥಿತಿಗೆ ಸಿಲುಕಿಸಿದ ಕರಾಳ ಇತಿಹಾಸವನ್ನು ಅಂಟಿಸಿಕೊಂಡಿದೆ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಅಸಮಾಧಾನ ಹೊರಹಾಕಿದ್ದಾರೆ.



ತಮ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಸರ್ಕಾರ ಈ ನಿಟ್ಟಿನಲ್ಲಿ ತನ್ನ ಬದ್ಧತೆಯನ್ನು ಪ್ರದರ್ಶಿಸಿ 56,432 ಹುದ್ದೆಗಳ ಭರ್ತಿಗೆ ಮೀನಾಮೇಷ ಎಣಿಸದೇ ಅಧಿಸೂಚನೆ ಹೊರಡಿಸಿ ಅತೀ ಶೀಘ್ರದಲ್ಲಿ ನ್ಯಾಯೋಚಿತವಾಗಿ ಅಭ್ಯರ್ಥಿಗಳ ಆಯ್ಕೆ ಆಗುವಂತೆ ಕಾಳಜಿ ಪ್ರದರ್ಶಿಸಲಿ. ಇಲ್ಲವಾದರೆ ಸದ್ಯ ಈಗಾಗಲೇ ಹತಾಶೆಯ ಅಂಚಿನಲ್ಲಿರುವ ಲಕ್ಷಾಂತರ ನಿರುದ್ಯೋಗಿಗಳ ಆಕ್ರೋಶ ಆಸ್ಫೋಟವಾಗಲಿದೆ ಎಂಬ ಎಚ್ಚರಿಕೆ ನೀಡಿದ್ದಾರೆ.

ನಿರುದ್ಯೋಗಿ ಯುವಜನರ ಬೃಹತ್ ಪ್ರತಿಭಟನೆಗೆ ಮಣಿದು 56,432 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಆರಂಭಿಸುವುದಾಗಿ ಸರ್ಕಾರ ಪ್ರಕಟಿಸಿದೆ. ಆದರೆ ಈ ಸಂಬಂಧ ಇನ್ನೂ ಅಧಿಸೂಚನೆ ಹೊರಡಿಸಿಲ್ಲ.

ಸರ್ಕಾರಿ ಯಂತ್ರವನ್ನು ಸಮರ್ಥವಾಗಿ ನಿಭಾಯಿಸಲು ಅರ್ಹ ಅಧಿಕಾರಿಗಳನ್ನು ನೇಮಿಸುವ ಸಾಂವಿಧಾನಿಕ ಹೊಣೆ ಹೊತ್ತಿರುವ ಲೋಕಸೇವಾ ಆಯೋಗ ಅಭ್ಯರ್ಥಿಗಳ ಆಯ್ಕೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವುದರಲ್ಲಿ ವಿಫಲವಾಗಿ ಬ್ರಹ್ಮಾಂಡ ಭ್ರಷ್ಟಾಚಾರ, ಅಕ್ರಮ ಹಾಗೂ ದೋಷಪೂರಿತ ಪ್ರಕ್ರಿಯೆಗಳಿಂದ ಕುಖ್ಯಾತಿ ಪಡೆದಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಆಯೋಗದ ಈ ದುರವಸ್ಥೆಗೆ ಅಂಕುಶ ಹಾಕಲು ಆಯೋಗದ ವಿರುದ್ಧದ ನ್ಯಾಯಾಲಯದ ಅನೇಕ ತೀರ್ಪುಗಳು ಭ್ರಷ್ಟ ವ್ಯವಸ್ಥೆಯನ್ನು ಬಯಲು ಮಾಡಿದೆ.

ಕೆಲ ತಪ್ಪಿತಸ್ಥರ ಮುಖವಾಡಗಳು ಕೂಡ ಕಳಚಿ ಬಿದ್ದಿವೆ. ಇಷ್ಟಾಗಿಯೂ ಆಯೋಗದ ವ್ಯವಸ್ಥೆಗೆ ಕಾಯಕಲ್ಪ ನೀಡುವ ಪ್ರಯತ್ನ ಈವರೆವಿಗೂ ಸಾಧ್ಯವಾಗಿಲ್ಲ, ಸದ್ಯ ನೂತನ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಅಭ್ಯರ್ಥಿಗಳ ಆಯ್ಕೆಗೆ ಸುಧಾರಣೆಗಳನ್ನು ತರುವುದಾಗಿ ಆಯೋಗದ ಮೂಲಗಳು ತಿಳಿಸಿವೆ.

ಆದರೆ ಇದನ್ನು ನಂಬುವ ಮನಃಸ್ಥಿತಿಯನ್ನು ಉದ್ಯೋಗಾಕಾಂಕ್ಷಿಗಳು ಕಳೆದುಕೊಂಡಿದ್ದಾರೆ. ಆದಾಗ್ಯೂ ಈ ನಿಟ್ಟಿನಲ್ಲಿ ಕರ್ನಾಟಕ ಲೋಕ ಸೇವಾ ಆಯೋಗ ಇನ್ನಾದರೂ ಪಾರದರ್ಶಕತೆ ಕಾಯ್ದುಕೊಂಡು ಕಟ್ಟುನಿಟ್ಟಿನ ನಿಯಮಗಳನ್ನು ಅಳವಡಿಸಿಕೊಂಡು ಅರ್ಹ ಅಭ್ಯರ್ಥಿಗಳ ಆಯ್ಕೆಗೆ ಸುಭದ್ರ ವ್ಯವಸ್ಥೆ ರೂಪಿಸಿಕೊಳ್ಳದೇ ಹೋದರೆ ಮುಂದಿನ ದಿನಗಳಲ್ಲಿ ಆಯೋಗದ ಅಸ್ತಿತ್ವವನ್ನು ಪ್ರಶ್ನಿಸುವ ಪರಿಸ್ಥಿತಿ ಉದ್ಭವವಾಗಲಿದೆ ಎಂದು ಎಚ್ಚರಿಕೆ ನೀಡಿದ್ದಾರೆ.

## ಸ್ವಾವಲಂಬಿ ಭಾರತ ನಿರ್ಮಾಣಕ್ಕೆ ತಂತ್ರಜ್ಞಾನವೇ ಆಧಾರ ಸ್ಥಂಭ : ಪ್ರಧಾನಿ



**ನವದೆಹಲಿ, ಮೇ 11–** ಕಳೆದ 1998 ರ ಮೇ 11 ರಂದು ರಾಜಸ್ಥಾನದ ಪೋಖ್ರಾನ್‌ನಲ್ಲಿ ಭಾರತ ಯಶಸ್ವಿಯಾಗಿ ಪರಮಾಣು ಪರೀಕ್ಷೆಗಳನ್ನು ನಡೆಸಿದ ಸ್ಮರಣಾರ್ಥ ರಾಷ್ಟ್ರೀಯ ತಂತ್ರಜ್ಞಾನ ದಿನದಂದು ಪ್ರಧಾನಿ ನರೇಂದ್ರ ಮೋದಿ ಅವರು ಇಂದು ದೇಶದ ಜನರಿಗೆ ಶುಭಾಶಯ ಕೋರಿದರು ಮತ್ತು ಸ್ವಾವಲಂಬಿ ಭಾರತ ವನ್ನು ನಿರ್ಮಿಸುವಲ್ಲಿ ತಂತ್ರಜ್ಞಾನವು ಪ್ರಮುಖ ಆಧಾರ ಸ್ಥಂಭವಾಗಿದೆ ಎಂದು ಹೇಳಿದರು.

1998 ರ ಹೆಗ್ಗುರುತು ಕ್ಷಣವು ಭಾರತದ ವೈಜ್ಞಾನಿಕ ಶ್ರೇಷ್ಠತೆ ಮತ್ತು ಅಚಲ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಎಂದು ಮೋದಿ ಹೇಳಿದರು. ರಾಷ್ಟ್ರೀಯ ತಂತ್ರಜ್ಞಾನ 2ನೇಪುಟಕ್ಕೆ

### ಸಿಂಧನೂರು ಸರ್ಕಾರಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ವೈದ್ಯರ ಸಾಹಸ

## ಸಾವಿನ ದವಡೆಯಲ್ಲಿದ್ದ ತಾಯಿ ಮಗುವಿಗೆ ಮರುಜನ್ಮ ನೀಡಿದ ವೈದ್ಯರು



ಧೈರ್ಯದ ದಾರಿ

**ರಾಯಚೂರು ಮೇ.11:** ಸರ್ಕಾರಿ ಆಸ್ಪತ್ರೆ ಎಂದರೆ ಮೂಗು ಮುರಿಯುವವರ ನಡುವೆ ಸಿಂಧನೂರಿನ ಸರ್ಕಾರಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿ ವರ್ಗವು ಅಸಾಧ್ಯವಾದುದನ್ನು ಸಾಧ್ಯವಾಗಿಸಿ ತೋರಿಸಿದ್ದಾರೆ. ಅತ್ಯಂತ ಸಂಕೀರ್ಣವಾದ ವೈದ್ಯಕೀಯ ಸ್ಥಿತಿಯಲ್ಲಿದ್ದ ಗರ್ಭಿಣಿಯೊಬ್ಬರನ್ನು ಸಾವಿನ ದವಡೆಯಿಂದ ಮರಳಿ ತರುವ ಮೂಲಕ ಮಾನವೀಯತೆ ಮತ್ತು ವೃತ್ತಿಪರತೆಗೆ ಹೊಸ ಭಾಷ್ಯ ಬರೆದಿದ್ದಾರೆ.

ಶ್ರೀಮತಿ ಸೃಷ್ಟಿ ಎಂಬ 34 ವಾರಗಳ ಗರ್ಭಿಣಿ ತೀವ್ರ ರಕ್ತದೊತ್ತಡದೊಂದಿಗೆ (210/120 ಎಮ್‌ಎಮ್ ಹೆಚ್‌ಜಿ) ಆಸ್ಪತ್ರೆಗೆ ದಾಖಲಾದಾಗ ಅವರ ಸ್ಥಿತಿ ಅತ್ಯಂತ ಗಂಭೀರವಾಗಿತ್ತು. ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಅವರಿಗೆ ಶ್ವಾಸಕೋಶದಲ್ಲಿ ನೀರು ತುಂಬಿಕೊಂಡು (Pulmonary Oedema), ಆಮ್ಲಜನಕದ ಮಟ್ಟ (SPO2) ಕೇವಲ 40%ಕ್ಕೆ ಕುಸಿದಿತ್ತು. ವೈದ್ಯಕೀಯ ಭಾಷೆಯಲ್ಲಿ ಇದನ್ನು ನಿಯರ್ ಮಿಸ್ (Near Miss) ಕೇಸ್ ಎನ್ನಲಾಗುತ್ತದೆ. ರೋಗಿಯನ್ನು ಉನ್ನತ ಚಿಕಿತ್ಸೆಗಾಗಿ ರಾಯಚೂರಿಗೆ ಕಳುಹಿಸಲು ಸಮಯವೇ ಇರಲಿಲ್ಲ, ಪ್ರತಿ ಸೆಕೆಂಡ್ ಕೂಡ ಪ್ರಾಣಾಪಾಯವನ್ನು ಹೊತ್ತು ತಂದಿತ್ತು. ಇಂತಹ ಸಂದರ್ಭದಲ್ಲಿ ಎದೆಗುಂದದ ತಾಯಿ ಮಕ್ಕಳ ಆಸ್ಪತ್ರೆಯ ತಂಡವು ತಕ್ಷಣವೇ ಕಾರ್ಯಪ್ರವೃತ್ತವಾಯಿತು. ತುರ್ತಾಗಿ ಖಾಸಗಿ ಆಸ್ಪತ್ರೆಯಿಂದ ವೆಂಟಿಲೇಟರ್ ವ್ಯವಸ್ಥೆ ಮಾಡಲಾಯಿತು. ಒಂದು ಕಡೆ ರೋಗಿಯ ಸ್ಥಿತಿ ಕ್ಷಣಕ್ಷಣಕ್ಕೂ ಕ್ಷೀಣಿಸುತ್ತಿದ್ದರೆ. ಮತ್ತೊಂದೆಡೆ ವೈದ್ಯರ ತಂಡವು ಜೀವ ಉಳಿಸುವ ಪಣ ತೊಟ್ಟಿತು. ಆನ್ ಟೇಬಲ್ ಡೆತ್ ಸಂಭವಿಸುವ ಅಪಾಯವಿದ್ದರೂ ರೋಗಿಯ ಪೋಷಕರು ವೈದ್ಯರ ಮೇಲೆ ನಂಬಿಕೆಯಿಟ್ಟು ಶಸ್ತ್ರ ಚಿಕಿತ್ಸೆಗೆ ಒಪ್ಪಿಗೆ ನೀಡಿದರು.

ವೈದ್ಯರಾದ ಡಾ.ಶಕುಂತಲಾ ಪಾಟೀಲ್, ಡಾ.ಕಾವೇರಿ ಶಾವಿ, ಡಾ.ವಿದ್ಯಾ, ಡಾ.ಶೋಭಾ, ಡಾ.ಫರ್ಹತ್ ಮತ್ತು ಡಾ.ಹನುಮಂತ ರೆಡ್ಡಿ ಅವರ ನೇತೃತ್ವದ ತಂಡವು ಯಶಸ್ವಿಯಾಗಿ ತುರ್ತು ಶಸ್ತ್ರಚಿಕಿತ್ಸೆ ನಡೆಸಿ ಜೀವಂತ ಮಗುವನ್ನು ಹೊರತೆಗೆದರು.

ಶಸ್ತ್ರ ಚಿಕಿತ್ಸೆಯ ನಂತರ ತಾಯಿಯನ್ನು ಹೆಚ್ಚಿನ ನಿಗಾಕ್ಕಾಗಿ ವೆಂಟಿಲೇಟರ್‌ಗೆ ಸ್ಥಳಾಂತರಿಸಲಾಯಿತು. 2ನೇಪುಟಕ್ಕೆ

## ಮೇ. ಮಾಹೆಯ ಪಡಿತರ ಧಾನ್ಯ ವಿತರಣೆ

ಧೈರ್ಯದ ದಾರಿ



**ರಾಯಚೂರು ಮೇ.11 :** ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ, 2013 ರಡಿ ಮೇ 2026 ಮತ್ತು ಜೂನ್ 2026 ರ ಮಾಹೆಯ ಆಹಾರ ಧಾನ್ಯಗಳನ್ನು ಮೇ 2026 ರ ಮಾಹೆಯಲ್ಲಿಯೇ ವಿತರಣೆ ಮಾಡಲು ಸರ್ಕಾರವು ನಿರ್ದೇಶಿಸಿರುವ ಹಿನ್ನಲೆಯಲ್ಲಿ ಮೇ 2026 ರ ಮಾಹೆಯಲ್ಲಿ ರಾಯಚೂರು ಜಿಲ್ಲೆಯ ಕೇಂದ್ರ ವ್ಯಾಪ್ತಿಯ ಪ್ರತಿ ಅಂತ್ಯೋದಯ(ಎಎವೈ) ಪಡಿತರ ಚೀಟಿಗೆ 70 ಕೆ.ಜಿ ಅಕ್ಕಿ ಹಾಗೂ ಕೇಂದ್ರ ಮತ್ತು ರಾಜ್ಯ ವ್ಯಾಪ್ತಿಯ ಪಿ.ಹೆಚ್.ಹೆಚ್ (ಬಿಪಿಎಲ್) ಪಡಿತರ ಚೀಟಿಯಲ್ಲಿನ ಪ್ರತಿ ಫಲಾನುಭವಿಗೆ 10 ಕೆ.ಜಿ ಅಕ್ಕಿಯನ್ನು ಉಚಿತವಾಗಿ ವಿತರಿಸಲಾಗುವುದೆಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕ ನಜೀರ್ ಅಹ್ಮದ್ ಅವರು ತಿಳಿಸಿದ್ದಾರೆ.

ಪ್ರತಿದಿನ ಬೆಳಿಗ್ಗೆ 06 ರಿಂದ ರಾತ್ರಿ 10ಗಂಟೆಯವರೆಗೆ ನ್ಯಾಯ ಬೆಲೆ ಅಂಗಡಿಯಲ್ಲಿ ಸರ್ವರ್ ಲಭ್ಯಗೊಳಿಸಿರುವುದರಿಂದ ಪಡಿತರ ಚೀಟಿದಾರರು ಸದರಿ ಸಮಯವನ್ನು ಸದ್ಬಳಕೆಪಡಿಸಿಕೊಂಡು ಸಂಬಂಧ ಪಟ್ಟ ನ್ಯಾಯ ಬೆಲೆ ಅಂಗಡಿಯ ಮುಖಾಂತರ ಪಡಿತರ ಪಡೆಯುವ ಸಮಯದಲ್ಲಿ 02 ಬಾರಿ ಬಯೋಮೆಟ್ರಿಕ್ ನೀಡುವುದನ್ನು ಕಡ್ಡಾಯಗೊಳಿಸಲಾಗಿದೆ. ಮತ್ತು ಅನ್ನಸುವಿಧಾ ಯೋಜನೆಯ ಪಡಿತರ ಫಲಾನುಭವಿಗಳು ಮೇ ಮತ್ತು ಜೂನ್ 2026 ರ ಮಾಹೆಯಲ್ಲಿ ತಮ್ಮ ಹತ್ತಿರದ ನ್ಯಾಯಬೆಲೆ ಅಂಗಡಿಗೆ ಭೇಟಿ ನೀಡಿ 02 ಬಾರಿ ಬಯೋಮೆಟ್ರಿಕ್ ನೀಡಿ ಪಡಿತರವನ್ನು ಪಡೆದುಕೊಳ್ಳಬಹುದಾಗಿದೆ.

ಒಂದು ವೇಳೆ ಪಡಿತರ ಚೀಟಿದಾರರು ಕೇವಲ ಒಂದೇ ಬಾರಿ ಬಯೋಮೆಟ್ರಿಕ್ ನೀಡಿದ್ದಲ್ಲಿ ಸದರಿ ಯೋಜನೆಯಡಿ ಜೂನ್ 2026 ರ ಮಾಹೆಗೆ ಹಂಚಿಕೆಯಾದ ಆಹಾರ ಧಾನ್ಯಗಳನ್ನು ವಿತರಿಸಲು ಸಾಧ್ಯವಾಗುವುದಿಲ್ಲ ಮತ್ತು ಸದರಿ ಮಾಹೆಯ ಆಹಾರ ಧಾನ್ಯಗಳು ವ್ಯಪಗತವಾಗುತ್ತದೆ. ಪ್ರಯುಕ್ತ ಮೇ 2026 ರ ಮಾಹೆಯಲ್ಲಿ ದಿನಾಂಕ: 31.05.2026 ರೊಳಗಾಗಿ 02 ಬಾರಿ ಬಯೋಮೆಟ್ರಿಕ್ ನೀಡಿ ಪಡಿತರವನ್ನು ಪಡೆದುಕೊಳ್ಳಬಹುದಾಗಿದೆ.

ಒಂದು ರಾಷ್ಟ್ರ ಒಂದು ಪಡಿತರ ಚೀಟಿ (ಅಂತರ್ ರಾಜ್ಯ/ ಅಂತರ್ ಜಿಲ್ಲೆ) ಪೋರ್ಟೆಬಿಲಿಟಿ ಜಾರಿಯಲ್ಲಿರುವುದರಿಂದ ಯಾವುದೇ ರಾಜ್ಯದ ಪಡಿತರ ಚೀಟಿದಾರರು ಯಾವುದೇ ವರ್ಗದ ಪಡಿತರ ಚೀಟಿದಾರರು ಯಾವುದೇ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಯಾವುದೇ ನ್ಯಾಯಬೆಲೆ ಅಂಗಡಿಕಾರರು ಕಡಿಮೆ ಪ್ರಮಾಣದ ಪಡಿತರವನ್ನು ವಿತರಣೆ ಮಾಡಿದ್ದಲ್ಲಿ, ಹಣ ಕೇಳಿದ್ದಲ್ಲಿ ಮತ್ತು ಇತರೆ ದೂರುಗಳಿಗೆ ನಿಶುಲ್ಕ ದೂರವಾಣಿ ಸಂಖ್ಯೆ 1967ಗೆ ಹಾಗೂ ತಾಲ್ಲೂಕಿನಲ್ಲಿರುವ ತಹಶೀಲ್ದಾರರ ಕಛೇರಿಗೆ ಅಥವಾ ಜಿಲ್ಲೆಯ ಉಪನಿರ್ದೇಶಕರ ಕಛೇರಿಗೆ ದೂರನ್ನು ಸಲ್ಲಿಸಬಹುದಾಗಿದೆ.

ಈ ಯೋಜನೆಯಡಿ ವಿತರಿಸಲಾದ ಆಹಾರ ಧಾನ್ಯಗಳನ್ನು ಹಣಕ್ಕಾಗಿ ಪಡಿತರ ಚೀಟಿದಾರರು ಮಾರಾಟ ಮಾಡುವುದಾಗಲಿ ಅಥವಾ ಸಂಗ್ರಹಣೆ ಮಾಡುವುದು ಕಂಡುಬಂದಲ್ಲಿ ಅಂತಹ ಪಡಿತರ ಚೀಟಿದಾರರಿಗೆ ವಿತರಿಸಲಾದ ಆಹಾರ ಧಾನ್ಯಗಳಿಗೆ ಮುಕ್ತ ಮಾರುಕಟ್ಟೆ ದರಕ್ಕೆ ದಂಡ ವಿಧಿಸಲಾಗುವುದು ಮತ್ತು ಸದರಿ ಪಡಿತರ ಚೀಟಿಯನ್ನು ಆರು ತಿಂಗಳ ಅವಧಿಗೆ ಅಮಾನತ್ತುಗೊಳಿಸಲಾವುದೆಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರಾದ ನಜೀರ್ ಅಹ್ಮದ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಾಲ್ಮೀಕಿ ಸಮುದಾಯದ ಶೈಕ್ಷಣಿಕ ಅಭಿವೃದ್ಧಿಗೆ ಸರ್ಕಾರ ಬದ್ಧ: ಸಚಿವ ಎನ್.ಎಸ್. ಬೋಸರಾಜ್



ಧೈರ್ಯದ ದಾರಿ

**ಬಲಟಗಿ:** "ರಾಜ್ಯ ಸರ್ಕಾರವು ನಡೆಸಿದ ಸಮೀಕ್ಷೆಯಂತೆ ವಾಲ್ಮೀಕಿ ಸಮುದಾಯ ಶೈಕ್ಷಣಿಕವಾಗಿ ಹಿಂದುಳಿದಿರುವುದು ಮನವರಿಕೆಯಾಗಿದ್ದು, ಸಮುದಾಯದ ವಿದ್ಯಾರ್ಥಿಗಳ ಉನ್ನತ ಶಿಕ್ಷಣ ಹಾಗೂ ವಸತಿ ಸೌಲಭ್ಯಕ್ಕಾಗಿ ವಿಶೇಷ ಪ್ರೋತ್ಸಾಹ ನೀಡಲು ಸಚಿವ ಸಂಪುಟ ನಿರ್ಧರಿಸಿದೆ," ಎಂದು ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜ್ ಅವರು ತಿಳಿಸಿದರು. ತಾಲೂಕಿನ ಬಲಟಗಿ ಗ್ರಾಮದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಶ್ರೀ ಮಹರ್ಷಿ ವಾಲ್ಮೀಕಿ ವೃತ್ತ ಹಾಗೂ ಕಂಚಿನ ಪ್ರತಿಮೆ ಲೋಕಾರ್ಪಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

**ವರದಿಯ ಮುಖ್ಯಾಂಶಗಳು:** ಶೈಕ್ಷಣಿಕ ಉತ್ತೇಜನ: ವಾಲ್ಮೀಕಿ ಸಮುದಾಯದ ಮಕ್ಕಳಿಗೆ ವಸತಿ ಶಾಲೆ, ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣಕ್ಕೆ ಅಗತ್ಯ ನೆರವು ನೀಡಲು ಸರ್ಕಾರ ಬದ್ಧವಾಗಿದೆ. ಈ ಸೌಲಭ್ಯಗಳನ್ನು ಸಮುದಾಯದವರು ಸದುಪಯೋಗಪಡಿಸಿಕೊಳ್ಳಬೇಕು.

ಸಮುದಾಯ ಭವನಗಳ ನಿರ್ಮಾಣ: ಮಾನ್ವಿ ಮತ್ತು ಸಿರವಾರ ತಾಲೂಕುಗಳಲ್ಲಿ ತಲಾ 2 ಕೋಟಿ ರೂ. ವೆಚ್ಚದಲ್ಲಿ ವಾಲ್ಮೀಕಿ ಸಮುದಾಯ ಭವನ ನಿರ್ಮಿಸಲಾಗುವುದು. ಸಚಿವ ಸತೀಶ್ ಜಾರಕಿಹೊಳಿ ಅವರಿಂದ ಶೀಘ್ರವೇ ಶಂಕುಸ್ಥಾಪನೆ ನೆರವೇರಿಸಲಾಗುವುದು. ಅಲ್ಲದೆ, ತಾಲೂಕಿನ ಇತರೆ 13 ಸಮುದಾಯಗಳ ಭವನಗಳಿಗೂ ಅನುದಾನ ನೀಡಲಾಗಿದೆ.

ಗುರುಪೀಠದ ಶ್ಲಾಘನೆ: ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮಿಗಳು ಪಾದಯಾತ್ರೆ ಹಾಗೂ ಹೋರಾಟಗಳ ಮೂಲಕ ಸಮುದಾಯದ ಅಭಿವೃದ್ಧಿಗೆ ಸರ್ಕಾರದ ಗಮನ ಸೆಳೆಯುತ್ತಿರುವುದು ಶ್ಲಾಘನೀಯ ಎಂದರು.

**ದಿವ್ಯ ಸನ್ನಿಧಿ ಮತ್ತು ಗಣ್ಯರ ನುಡಿ:** ಶ್ರೀ ಪ್ರಸನ್ನಾನಂದಪುರಿ ಮಹಾಸ್ವಾಮಿಗಳು ಮಾತನಾಡಿ, "ರಾಮಾಯಣದ ಮೂಲಕ ಜಗತ್ತಿಗೆ ಸಂಸ್ಕೃತಿ ನೀಡಿದ ವಾಲ್ಮೀಕಿ ಮಹರ್ಷಿಗಳನ್ನು ಕೇವಲ ಒಂದು ಸಮುದಾಯಕ್ಕೆ ಸೀಮಿತಗೊಳಿಸಬಾರದು. ಮಹನೀಯರ ತತ್ವಗಳು ಇಡೀ ಸಮಾಜಕ್ಕೆ ದಾರಿದೀಪ," ಎಂದರು.

ಶಾಸಕ ಹಂಪಯ್ಯ ನಾಯಕ್ ಮಾತನಾಡಿ, ಮುಂದಿನ ಪೀಳಿಗೆಗೆ ಉತ್ತಮ ಶಿಕ್ಷಣ ಒದಗಿಸಲು ಸಮುದಾಯ ಸಂಘಟಿತವಾಗಬೇಕೆಂದು ಕರೆ ನೀಡಿದರು. ಸಂಸದ ಜಿ. ಕುಮಾರ ನಾಯಕ್, ತೆಲಂಗಾಣ ಸಚಿವ ಶ್ರೀಹರಿ, ಮಾಜಿ ಶಾಸಕ ಗಂಗಾಧರ ನಾಯಕ್ ಸೇರಿದಂತೆ ಹಲವರು ವೇದಿಕೆಯಲ್ಲಿ ಮಾತನಾಡಿದರು.

ಭವ್ಯ ಮೆರವಣಿಗೆ: ಕಾರ್ಯಕ್ರಮಕ್ಕೂ ಮುನ್ನ ಬಲಟಗಿ ಗ್ರಾಮದ ನೇತಾಜಿ ಶಿಕ್ಷಣ ಸಂಸ್ಥೆಯ ವತಿಯಿಂದ ನೂರಾರು ಮಹಿಳೆಯರು ಪೂರ್ಣಕುಂಭಗಳೊಂದಿಗೆ ಪ್ರಮುಖ ಬೀದಿಗಳಲ್ಲಿ ಶ್ರೀಗಳ ಭವ್ಯ ಮೆರವಣಿಗೆ ನಡೆಸಿದರು.

ಉಪಸ್ಥಿತಿ.:ಸಂಸದ ಜಿ ಕುಮಾರ ನಾಯಕ್, ಶಾಸಕ ಹಂಪಯ್ಯ ನಾಯಕ್ ಮಾಜಿ ಶಾಸಕ ಗಂಗಾಧರ್ ನಾಯಕ್, ರವಿ ಬೋಸರಾಜ್ , ಶಿವರಾಜ್ ನಾಯಕ್, ಸಿದ್ದಲಿಂಗಪ್ಪ ವಕೀಲರು, ಶಾಂತಪ್ಪ, ಶರಣಯ್ಯ ಗುಡದಿನ್ನಿ ರಾಜೇಶ್ ಕಲ್ಲೂರು, ಕಿರಲಿಂಗಪ್ಪ, ಹರ್ಷವರ್ಧನ್, ಅಬ್ದುಲ್ ಗಫೂರ್ ಸಾಬ್, ಚಿಕ್ಕಿ ಸುಗಪ್ಪ, ನಜೀರ್, ಗುರು ಬಿಕೆ ಅಂಬರೀಶಪ್ಪ, ಶಿವಮೂರ್ತಿ ಹಾಗೂ ವಾಲ್ಮೀಕಿ ಸಮುದಾಯದ ಮುಖಂಡರು ಮತ್ತು ಗ್ರಾಮಸ್ಥರು ಉಪಸ್ಥಿತಿಇದ್ದರು

## ಸ್ತ್ರೀ ಕುಲಕ್ಕೆ ಹೇಮರೆಡ್ಡಿ ಮಲ್ಲಮ್ಮ ಅನನ್ಯ ರತ್ನ: ಪ.ಪಂ ಅಧ್ಯಕ್ಷ ಹಾಜಿಚೌದ್ರಿ

ಧೈರ್ಯದ ದಾರಿ




**ಸಿರವಾರ:** "ಮಹಾಸಾಧ್ವಿ, ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ ಆದರ್ಶ ಗುಣಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡು ಸುಖಿ ಕುಟುಂಬಗಳಾದಾಗ ಮಾತ್ರ ಜಯಂತಿ ಆಚರಣೆ ಅರ್ಥಪೂರ್ಣವಾಗುತ್ತದೆ," ಎಂದು ಪಟ್ಟಣ ಪಂಚಾಯತಿ ಅಧ್ಯಕ್ಷರಾದ ಹಾಜಿಚೌದ್ರಿ ಅವರು ಹೇಳಿದರು.

ಮೇ 10 ರಂದು ಸ್ಥಳೀಯ ಪಟ್ಟಣ ಪಂಚಾಯತಿ ಕಾರ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಕಾರ್ಯಕ್ರಮದಲ್ಲಿ ಮಲ್ಲಮ್ಮನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಮಾಲಾರ್ಪಣೆ ಮಾಡಿ ಅವರು ಮಾತನಾಡಿದರು.

ಮಾರ್ಗದರ್ಶಕಿ: ಪೂಜ್ಯನೀಯ ಸ್ಥಾನ ಹೊಂದಿರುವ ಹೇಮರೆಡ್ಡಿ ಮಲ್ಲಮ್ಮ ಇಡೀ ಸಮಾಜಕ್ಕೆ ಮಾರ್ಗದರ್ಶಕಿಯಾಗಿದ್ದಾರೆ. ತನಗಾಗಿ ಏನನ್ನೂ ಬಯಸದ ಅವರು 2ನೇಪುಟಕ್ಕೆ

ಮೊದಲನೇ ಪುಟದಿಂದ

### ಸಿಂಧನೂರು ಸರ್ಕಾರಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ವೈದ್ಯರ ಸಾಹಸ

# ಸಾವಿನ ದವಡೆಯಲ್ಲಿದ್ದ ತಾಯಿ ಮಗುವಿಗೆ ಮರುಜನ್ಮ ನೀಡಿದ ವೈದ್ಯರು

ಫಲಿಸಿದ ಶ್ರಮ, ಚೇತರಿಸಿಕೊಂಡ ತಾಯಿ-ಮಗು: ವೈದ್ಯಕೀಯ ತಂಡದ ಸತತ ಪರಿಶ್ರಮದ ಫಲವಾಗಿ ಶ್ರೀಮತಿ ಸೃಷ್ಟಿ ಅವರು ಇದೀಗ ವೆಂಟಿಲೇಟರ್‌ನಿಂದ ಹೊರಬಂದಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ. ಮಗು ಕೂಡ ಎನ್‌ಐಸಿಯುನಲ್ಲಿ ಸುರಕ್ಷಿತವಾಗಿದ್ದು, ಒಂದು ದೊಡ್ಡ ದುರಂತವು ಪವಾಡ ಸದೃಶವಾಗಿ ಸುಖಾಂತ್ಯ ಕಂಡಿದೆ.

ಈ ಯಶಸ್ಸಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಧಿಕಾರಿಗಳು ಡಾ.ಸುರೇಂದ್ರ ಬಾಬು, ಮತ್ತು ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ನಂದಿತಾ ಎಮ್.ಎನ್., ಅವರ ಬೆಂಬಲ ಹಾಗೂ ಪ್ರೇರಣೆ ಬಹುದೊಡ್ಡ ಶಕ್ತಿಯಾಗಿತ್ತು.

ವ್ಯವಸ್ಥೆಯ ನಡುವೆ ಮಿಂಚಿದ ಸೇವೆಯು, ಸರ್ಕಾರಿ ಆಸ್ಪತ್ರೆಗಳಲ್ಲಿ ನುರಿತ ವೈದ್ಯಕೀಯ ತಂಡ, ಸುಸಜ್ಜಿತ ಕಟ್ಟಡ, ಗುಣಮಟ್ಟದ ಅತ್ಯಾಧುನಿಕ ಸಲಕರಣೆಗಳು, ರಾಷ್ಟ್ರೀಯ ಗುಣಮಟ್ಟ ಮಾನದಂಡಿಯ ಹೆರಿಗೆ ಕೊಠಡಿ, ವಾರ್ಡ್, ಬೇಬಿ ವಾರ್ಮರ್, ಬಾಣಂತಿಗೆ ಪೌಷ್ಟಿಕ ಆಹಾರ, ಸೂಕ್ತ ಆರೈಕೆ, ಔಷಧಿ ವಿತರಣೆ, ಮನೆಗೆ ಬಿಡಲು ನಗುಮಗು ವಾಹನ ಲಭ್ಯತೆ ಇರುವುದನ್ನು ಖಾತರಿಪಡಿಸಿವೆ.

ಕೆಲವು ಅನಗತ್ಯ ಸಾಮಾಜಿಕ ಒತ್ತಡಗಳ ನಡುವೆಯೂ ಈ ಸಾಧನೆ ಮಾಡಲಾಗಿದೆ. ಎಂಬುದು ಗಮನಾರ್ಹ. ವೈದ್ಯರಿಗೆ ಒತ್ತಡರಹಿತ ವಾತಾವರಣ ಮತ್ತು ಸಾರ್ವಜನಿಕರ ವಿಶ್ವಾಸ ಸಿಕ್ಕರೆ ಇಂತಹ ಪವಾಡಗಳನ್ನು ಮಾಡಲು ಸಾಧ್ಯ ಎಂದು ಈ ಘಟನೆ ಸಾಬೀತುಪಡಿಸಿದೆ.

ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಹೋರಾಡಿದ ಈ ವೈಟ್ ಕೋಟ್ ಯೋಧರಿಗೆ ಮತ್ತು ಅವರಿಗೆ ಸಾಥ್ ನೀಡಿದ ಶುಶ್ರೂಷಣಾ ಅಧಿಕಾರಿಗಳಾದ ಶಾರದಾ, ಜಯಂತಿ, ಪುಷ್ಪರಾಣಿ, ಗೌತಮಿ, ಚೈತ್ರಾ ಹಾಗೂ ಇತರ ಸಿಬ್ಬಂದಿ ವರ್ಗದ ಶ್ರಮವು ಇದರ ಹಿಂದೆ ಇದೆ ಎಂದರೆ ತಪ್ಪಾಗಲಾರದು ಎಂದು ಸಿಂಧನೂರಿನ ಸರ್ಕಾರಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ವೈದ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸ್ತ್ರೀ ಕುಲಕ್ಕೆ ಹೇಮರೆಡ್ಡಿ ಮಲ್ಲಮ್ಮ ಅನನ್ಯ ರತ್ನ: ಪ.ಪಂ ಅಧ್ಯಕ್ಷ ಹಾಜಿಚೌದ್ರಿ

ನಿಸ್ವಾರ್ಥ ಜೀವನ ನಡೆಸಿದವರು. ಮಾನವೀಯ ಮೌಲ್ಯ: ಕೌಟುಂಬಿಕ ಕಲಹ, ಕಷ್ಟ ಹಾಗೂ ಅವಮಾನಗಳ ನಡುವೆಯೂ ಧೃತಿಗೆಡದೆ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿದ ಧೀಮಂತ ಮಹಿಳೆ ಇವರು.

ಆದರ್ಶ: ಮಲ್ಲಮ್ಮನವರ ಬದುಕು ಇಂದಿನ ಸ್ತ್ರೀ ಕುಲಕ್ಕೆ ಒಂದು ಅನನ್ಯ ರತ್ನವಿದ್ದಂತೆ ಎಂದು ಹಾಜಿಚೌದ್ರಿ ಬಣ್ಣಿಸಿದರು.

ಉಪಸ್ಥಿತ ಗಣ್ಯರು:

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತಿ ಸದಸ್ಯರಾದ ಮೌಲಾಸಾಬ ವರ್ಚಸ್, ಬಸವರಾಜ ಸಾಹುಕಾರ, ಮಲ್ಲಪ್ಪ, ಗ್ಯಾನಪ್ಪ, ರಂಗನಾಥ ಭೋವಿ, ಸಮುದಾಯ ಸಂಘಟನಾ ಅಧಿಕಾರಿ ಹಂಪಯ್ಯ ಪಾಟೀಲ್, ಸುರೇಶ ಹೀರಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಸ್ವಾವಲಂಬಿ ಭಾರತ ನಿರ್ಮಾಣಕ್ಕೆ ತಂತ್ರಜ್ಞಾನವೇ ಆಧಾರ ಸ್ಥಂಭ : ಪ್ರಧಾನಿ

ದಿನದಂದು ಶುಭಾಶಯಗಳು. 1998 ರಲ್ಲಿ ಪೋಖ್ರಾನ್‌ನಲ್ಲಿ ಯಶಸ್ವಿ ಪರೀಕ್ಷೆಗಳಿಗೆ ಕಾರಣವಾದ ನಮ್ಮ ವಿಜ್ಞಾನಿಗಳ ಕಠಿಣ ಪರಿಶ್ರಮ ಮತ್ತು ಸಮರ್ಪಣೆಯನ್ನು ನಾವು ಹೆಮ್ಮೆಯಿಂದ ಸ್ಮರಿಸುತ್ತೇವೆ ಎಂದು ಎಕ್ಸ್ ಮಾಡಿದ್ದಾರೆ.

ಸ್ವಾವಲಂಬಿ ಭಾರತವನ್ನು ನಿರ್ಮಿಸುವಲ್ಲಿ ತಂತ್ರಜ್ಞಾನವು ಪ್ರಮುಖ ಆಧಾರಸ್ತಂಭವಾಗಿದೆ ಮತ್ತು ಇದು ನಾವೀನ್ಯತೆಯನ್ನು ವೇಗಗೊಳಿಸುತ್ತಿದೆ, ಅವಕಾಶಗಳನ್ನು ವಿಸ್ತರಿಸುತ್ತಿದೆ ಮತ್ತು ವಲಯಗಳಲ್ಲಿ ರಾಷ್ಟ್ರದ ಬೆಳವಣಿಗೆಗೆ ಕೊಡುಗೆ ನೀಡುತ್ತಿದೆ ಎಂದು ಪ್ರಧಾನಿ ಹೇಳಿದರು.

ಪ್ರತಿಭೆಯನ್ನು ಸಬಲೀಕರಣಗೊಳಿಸುವುದು, ಸಂಶೋಧನೆಯನ್ನು ಪ್ರೋತ್ಸಾಹಿಸುವುದು ಮತ್ತು ರಾಷ್ಟ್ರಿಯ ಪ್ರಗತಿ ಮತ್ತು ನಮ್ಮ ಜನರ ಆಕಾಂಕ್ಷೆಗಳಿಗೆ ಸೇವೆ ಸಲ್ಲಿಸುವ ಪರಿಹಾರಗಳನ್ನು ರಚಿಸುವುದರ ಮೇಲೆ ನಮ್ಮ ನಿರಂತರ ಗಮನ ಉಳಿದಿದೆ ಎಂದು ಅವರು ಹೇಳಿದರು.

1998 ರ ಈ ದಿನದಂದು ಪೋಖ್ರಾನ್‌ನಲ್ಲಿ ನಡೆಸಲಾದ ಪರಮಾಣು ಪರೀಕ್ಷೆಗಳು ಭಾರತದ ಗಮನಾರ್ಹ ಸಾಮರ್ಥ್ಯವನ್ನು ಜಗತ್ತಿಗೆ ಪರಿಚಯಿಸಿದವು ಎಂದು ಮೋದಿ ಹೇಳಿದರು.

ನಮ್ಮ ವಿಜ್ಞಾನಿಗಳು ರಾಷ್ಟ್ರದ ಹೆಮ್ಮೆ ಮತ್ತು ಸ್ವಾಭಿಮಾನದ ನಿಜವಾದ ವಾಸ್ತುಶಿಲ್ಪಿಗಳು ಎಂದು ಅವರು ಹೇಳಿದರು.1998 ರ ಮೇ 11 ಮತ್ತು 13 ರಂದು ರಾಜಸ್ಥಾನ ಮರುಭೂಮಿಯ ಪೋಖ್ರಾನ್ ಶ್ರೇ?ಣಿಯಲ್ಲಿ ಭಾರತವು ಸುಧಾರಿತ ಶಸ್ತ್ರಾಸ್ತ್ರ ವಿನ್ಯಾಸಗಳ ಐದು ಪರಮಾಣು ಪರೀಕ್ಷೆಗಳನ್ನು ನಡೆಸಿತು.ಮೊದಲ ಮೂರು ಸ್ಫೋ?ಟಗಳು ಮೇ 11 ರಂದು ಸಮಯ 15.45 ಕ್ಕೆ ಏಕಕಾಲದಲ್ಲಿ ನಡೆದಿದ್ದವು.

# ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ: ಮಹಿಳೆಯರಿಗೆ ಆದರ್ಶ ವ್ಯಕ್ತಿತ್ವ : ಡಾ. ದಂಡಪ್ಪ ಬಿರಾದಾರ



ಧೈರ್ಯದ ದಾರಿ

**ರಾಯಚೂರು :** ಡಾ. ದಂಡಪ್ಪ ಬಿರಾದಾರ ಅವರು ಮಹಿಳೆಯರು ತಮ್ಮ ಸಾಧನೆ, ಧೈರ್ಯ, ಭಕ್ತಿ ಮತ್ತು ಕಾಯಕದ ಮೂಲಕ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾರೆ ಎಂದು ಹೇಳಿದರು.

ರಾಯಚೂರು ನಗರದ ಪೂರ್ಣಿಮಾ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ ದಲ್ಲಿ ದಿನಾಂಕ 10-05-2026 ರಂದು ಬೆಳಗ್ಗೆ 9 ಗಂಟೆಗೆ ನಡೆದ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಹೇಮರೆಡ್ಡಿ ಮಲ್ಲಮ್ಮ ಭಾರತೀಯ ನಾರಿಯರಲ್ಲಿ ಶ್ರೇಷ್ಠ ಸಾಧಕಿಯಾಗಿ, ಭಕ್ತಿ, ನಿಷ್ಠೆ, ಸರಳತೆ ಹಾಗೂ ಸಜ್ಜನಿಕೆಯ ಮೂಲಕ ಶ್ರೀಶೈಲ ಮಲ್ಲಿಕಾರ್ಜುನನ ಕೃಪೆಗೆ ಪಾತ್ರರಾದ ಮಹಾಸಾಧ್ವಿ ಶಿವಶರಣೆ ಎಂದು ಬಣ್ಣಿಸಿದರು. ಕುಟುಂಬದಲ್ಲಿ ಎದುರಾದ ಅನೇಕ ಸಂಕಷ್ಟಗಳನ್ನು ಧೈರ್ಯದಿಂದ ಎದುರಿಸಿ, ಅತ್ತೆ-ನಾದಿನಿಯರ ಕಿರುಕುಳವನ್ನೂ ಸಹ ಸಕಾರಾತ್ಮಕವಾಗಿ ಸ್ವೀಕರಿಸಿ, ಕುಟುಂಬವನ್ನು ಒಗ್ಗೂಡಿಸಿದ ಆದರ್ಶ ಮಹಿಳೆ ಎಂದರು.

ಮೈದುನ ವೇಮನರನ್ನು ಸನ್ಮಾರ್ಗಕ್ಕೆ ತಂದು ಮಹಾಯೋಗಿ ವೇಮನರನ್ನಾಗಿ ರೂಪಿಸಿದ ಮಹಾನ್ ಶಕ್ತಿ ಹೇಮರೆಡ್ಡಿ ಮಲ್ಲಮ್ಮ ಎಂದ ಅವರು, "ಸಂಪತ್ತಿಗೆ ಸೊಕ್ಕಬೇಡಿ, ಸಿರಿ ಬಂದ ಕಾಲಕ್ಕೆ ಮೈಮರೆಯಬೇಡಿ, ದಾನ ಧರ್ಮದ ಮೂಲಕ ಸಮಾಜ ಸೇವೆ ಮಾಡಬೇಕು" ಎಂಬ ಅವರ ಸಂದೇಶ ಇಂದಿಗೂ ಪ್ರಸ್ತುತವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಪ್ರಾಸ್ತಾವಿಕವಾಗಿ ಡಾ. ಸಂತೋಷ್ ಕುಮಾರ್ ಮಾತನಾಡಿ ಎಲ್ಲರನ್ನು ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಡಾ. ವಂಶಿ ಕೃಷ್ಣ, ಡಾ. ಅಕ್ಷಯ, ವಿನಯ ಹೆಗಡೆ ಸೇರಿದಂತೆ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
6360866626

# ಬುದ್ದ ಬಸವ ಅಂಬೇಡ್ಕರ್ ತತ್ವಗಳು ವಿಶ್ವಮಾನ್ಯ : ಹುಲಸೂರ ಶ್ರೀ



**ಬೀದರ:ಮೇ.11:**ಬುದ್ದ ಬಸವ ಅಂಬೇಡ್ಕರ್ ತತ್ವಗಳು ವಿಶ್ವಮಾನ್ಯವಾಗಿದ್ದು. ಜಾಗತಿಕ ಶಾಂತಿ, ಸೌಹಾರ್ದತೆ ನೆಲೆಸಲು ಅವರ ತತ್ವಾದರ್ಶಗಳ ಅನುಷ್ಠಾನ ಅಗತ್ಯವಾಗಿದೆ ಎಂದು ಹುಲಸೂರು ಶ್ರೀ ಗುರು ಬಸವೇಶ್ವರ ಸಂಸ್ಥಾನ ಮಠದ ಪೂಜ್ಯ ಶ್ರೀ ಡಾ ಶಿವಾನಂದ ಮಹಾಸ್ವಾಮಿಗಳು ನುಡಿದರು. ಅವರು ಬಸವ ಕೇಂದ್ರ ಬೀದರ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಬೀದರ ಆಯೋಜಿತ ಶರಣ ಸಂಗಮ ಹಾಗೂ ಬುದ್ದ-ಬಸವ-ಅಂಬೇಡ್ಕರ್ ಜಯಂತಿ ಸಮಾರಂಭದ ಸಾನಿಧ್ಯವಹಿಸಿ ಮಾತನಾಡಿದರು.

ಸಮಾರಂಭ ಉದ್ಘಾಟಿಸಿ ಮಾತನಾಡಿದ ಬೀದರ ಜಿಲ್ಲಾ ಪಂಚಾಯತ ಮಾಜಿ ಉಪಾಧ್ಯಕ್ಷರಾದ ನೀಲಮ್ಮ ರೂಗನ್ ಅವರು ಮಾತನಾಡುತ್ತ ಮನುಷ್ಯ ಘನತೆಎತ್ತಿ ಹಿಡಿಯಬೇಕು ದಯೆ, ಕರುಣೆ ನಮ್ಮ ಬದುಕಿನ ಭಾಗವಾಗಬೇಕು. ಜನ ಬದುಕಬೇಕು, ಜಗತ್ತಿನ ಅಸಮಾನತೆ ಅಳಿಯಬೇಕು. ಅದಕ್ಕೆ ಬುದ್ದ ಬಸವ ಅಂಬೇಡ್ಕರ್ ಹೋರಾಡಿದರು. ಅವರ ತತ್ವ ನಾವು ಅಳವಡಿಸಿ ಕೊಳ್ಳಬೇಕೆಂದು ಹೇಳಿದರು.

ಬುದ್ದ-ಬಸವ-ಅಂಬೇಡ್ಕರ್ ಬಗ್ಗೆ ವಿಶೇಷ ಉಪನ್ಯಾಸ ನೀಡಿದ ಕರ್ನಾಟಕ ಪ.ಪೂ.ಕಾಲೇಜು ಪ್ರಾಚಾರ್ಯರಾದ ಡಾ ಬಸವರಾಜ ಬಲ್ಲೂರ ಅವರು ಮಾತನಾಡುತ್ತ ಲಿಂಗಾಯತರಿಗೆ ಬುದ್ದ ಅರ್ಥವಾಗುವವರೆಗೆ ಬಸವಣ್ಣ ಅರ್ಥವಾಗುವುದಿಲ್ಲ. ಹಾಗೇ ದಲಿತರಿಗೆ ಬಸವಣ್ಣ ಅರ್ಥವಾಗುವವರೆಗೆ ಅಂಬೇಡ್ಕರ ಕೂಡ ಅರ್ಥವಾಗುವುದಿಲ್ಲ. ಆದರೆ ದುರಂತದ ಸಂಗತಿ ಎಂದರೆ ಇಂದು ಬಸವಣ್ಣ ಲಿಂಗಾಯತ ಒಂದು ಜಾತಿಯ ಬಂಧನದಲ್ಲಿದ್ದರೆ ಅಂಬೇಡ್ಕರ ಇನ್ನೊಂದು ಜಾತಿಯ ಬಂಧನದಲ್ಲಿಟ್ಟುಕೊಂಡು ಸಣ್ಣತನ ಮೆರೆಯುತ್ತಿದ್ದೇವೆ ಬಸವಣ್ಣ ಮತ್ತು ಅಂಬೇಡ್ಕರ ಇರದಿದ್ದರೆ, ಭಾರತದ ಚರಿತ್ರೆ ಭಿನ್ನವಾಗಿರುತ್ತಿತ್ತು. ಇಷ್ಟೊತ್ತಿಗೆ ಈ ದೇಶದಲ್ಲಿ ಬಹುಸಂಸ್ಕೃತಿ, ಬಹುಭಾಷೆ, ಸೌಹಾರ್ದತೆ, ಮೊದಲಾದ ಬಹುತ್ವಗಳು ಇಲ್ಲವಾಗುತ್ತಿದ್ದವು.

ಬುದ್ಧ ಬಸವ ಹಾಗೂ ಅಂಬೇಡ್ಕರ ಬೇರೆ ಬೇರೆ ಕಾಲಘಟ್ಟಗಳಲ್ಲಿ ಬದುಕಿದ್ದರೂ ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕನ್ಯಾಯ ಅಹಿಂಸೆ ಮತ್ತು ವೈಚಾರಿಕತೆ ಹಾಗೂ ಮಾನವೀಯ ಮೌಲ್ಯಗಳ ವಿಷಯದಲ್ಲಿ ಸಾಮ್ಯತೆಗಳಿವೆ. ಮೂವರ ಮುಖ್ಯ ಗುರಿ ದುಃಖ ನಿವಾರಣೆ, ಶಾಂತಿ, ಸಮಾಜ ಸುಧಾರಣೆ, ಸಮಾನತೆ ಸಾಮಾಜಿಕ ನ್ಯಾಯ, ಮಹಿಳಾ ಸಬಲೀಕರಣ ಮತ್ತು ಪ್ರಜಾಪ್ರಭುತ್ವ ಪ್ರತಿಪಾದನೆ, ಸಂವಿಧಾನಿಕ ಹಕ್ಕುಗಳನ್ನು ದಯಪಾಲಸುವದಾಗಿತ್ತು.

ಮೂವರು ನಾಯಕರು ಜಾತಿ, ಲಿಂಗ ಮತ್ತು ವರ್ಗ ಆಧಾರಿತ ತಾರತಮ್ಯವನ್ನು ತೀವ್ರವಾಗಿ ವಿರೋಧಿಸಿದರು. ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಸಮಾನತೆಯನ್ನು ಕಾನೂನಾತ್ಮಕಗೊಳಿಸಿದರೆ, ಬಸವಣ್ಣನವರು ಅನುಭವ ಮಂಟಪದ ಮೂಲಕ ವಚನ ಸಾಹಿತ್ಯದಲ್ಲಿ ಸಮಾನತೆಯನ್ನು ಸಾರಿದರು.

ಬಸವಣ್ಣನವರು "ಕಾಯಕ ತತ್ವ ಎತ್ತಿ ಹಿಡಿದು ವೃತ್ತಿ ಗೌರವವನ್ನು ಎತ್ತಿಹಿಡಿದರೆ, ಬುದ್ಧನು "ಅತ್ತ ದೀಪೊ ಭವ" (ನಿನ್ನ ದೀಪ ನೀನೇ ಆಗು) ಎಂದು ಸ್ವಾವಲಂಬನೆಯನ್ನು ಬೋಧಿಸಿದನು. ಮೂವರೂ ಜಾತಿ ಭೇದ, ಅಂಧಶ್ರದ್ಧೆ ಜಾತಿ ವ್ಯವಸ್ಥೆ, ಕಪಟ ಆಚರಣೆ ಅಸ್ಪೃಶ್ಯತೆ, ಶೋಷಣೆಗಳನ್ನು ತೀವ್ರವಾಗಿ ವಿರೋಧಿಸಿದರು. ಇವರ ಈ ತತ್ವಗಳು ಇಂದಿಗೂ ಜಾತಿಮುಕ್ತ, ಸುಶಿಕ್ಷಿತ ಮತ್ತು ಸರ್ವಸಮತೆಯ ಸಮಸಮಾಜವನ್ನು ನಿರ್ಮಿಸಲು ದಾರಿದೀಪವಾಗಿವೆ. ಈ ವಿಚಾರಗಳನ್ನು ಜನಮಾನಸದ ಜೀವನದಲ್ಲಿ ಅಳವಡಿಸಿಕೊಳ್ಳುವುದು ಅತ್ಯಗತ್ಯವಾಗಿದ್ದು, ಲಿಂಗಾಯರು ಮತ್ತು ದಲಿತರಯ ಒಂದಾದರೆ ಧರ್ಮ ಸಹಿಷ್ಣುತೆ, ಸಾಮಾಜಿಕ ಸಾಮರಸ್ಯದ ಬಹುಸಂಸ್ಕೃತಿಯ ರಾಷ್ಟ್ರ ಕಟ್ಟಬಹುದಾಗಿದೆ ಎಂದು ಪ್ರತಿಪಾದಿಸಿದರು.

ಜಾನಪದ ಸಮೂಹ ಗಾಯನ ಮೂಲಕ ರಾಷ್ಟ್ರಮಟ್ಟದ ಮೂರನೇ ಬಹುಮಾನ ವಿಜೇತರಾದ ಎಂ.ಎಸ್. ಮನೋಹರ, ಮಲ್ಲಮ್ಮ, ದೀಪಾ, ಗಂಗಮ್ಮ, ಚಂದ್ರಕಾಂತ ದಂಡೆ, ಶಿವಪ್ಪ. ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತಿನ ನೂತನ ಗೌರವಾಧ್ಯಕ್ಷರಾದ ಬಾಬುರಾವ ದಾನಿ ಮೊದಲಾದವರನ್ನು ಸನ್ಮಾನಿಸಲಾಯಿತು.

ಜಾನಪದ ಸಮೂಹ ಗಾಯನದ ಮೂಲಕ ರಾಷ್ಟ್ರಮಟ್ಟದ ಮೂರನೇ ಬಹುಮಾನ ವಿಜೇತರಾದ ಭಾನುಪ್ರಿಯಾ ಅರಳಿ ಅವರು ಸನ್ಮಾನ ಸ್ವೀಕರಿಸಿ ಮಾತನಾಡುತ್ತ ಸಾಂಸ್ಕೃತಿಕ ಚಟುವಟಿಕೆಗಳು ಬದುಕಿನ ಏಕತಾನತೆ ಮುರಿಯುತ್ತವೆ. ರಾಜ್ಯ ಸರಕಾರಿ ನೌಕರರ ಸಂಘ ಆಯೋಜಿದ ರಾಜ್ಯ ಪ್ರಶಸ್ತಿ ಆಗಿತ್ತು ರಾಷ್ಟ್ರೀಯ ಪುರಸ್ಕಾರಕ್ಕಾಗಿ ಪರಿಶ್ರಮಿಸಿದರೆ ಫಲ ದೊರಕಿದೆ. ಇದರಿಂದ ಜಿಲ್ಲೆಗೆ ಅಭಿಮಾನ ಹೆಮ್ಮೆಯ ಸಂಗತಿಯಾಗಿದೆ. ಬೀದರ ಜನ ವಿಶೇಷವಾಗಿ ಸುರೇಶ ಚನಶೆಟ್ಟಿ ಮೊದಲಾದವರ ಸಹಕಾರ ಪ್ರೋತ್ಸಾಹವೆ ನಮಗೆ ಪ್ರೇರಣೆ ಎಂದು ನುಡಿದರು. ರಾಜ್ಯ ಯುವ ಪ್ರಶಸ್ತಿ ಪುರಸ್ಕೃತರು ಹಾಗೂ ಅಧ್ಯಕ್ಷರಾದ ಮಹೇಶ ಗೋರನಾಳಕರ ಗರ್ಭದಿಂದ ಗೋರಿವರೆಗೆ ಭಾರತೀಯ ಮನುಷ್ಯರ ಇಡಿ ಜೀವನ ಸಂವಿಧಾನದ ಚೌಕಟ್ಟಿನಲ್ಲಿ ಇದೆ. ಅದು ಬಾಬಾಸಾಹೇಬರ ಕೊಡುಗೆ ಎಂದು ತಿಳಿಸಿದರು.

ಜಿಲ್ಲಾ ಕಸಾಪ ಅಧ್ಯಕ್ಷರಾದ ಸುರೇಶ ಚನಶೆಟ್ಟಿ ಅಧ್ಯಕ್ಷತೆ ವಹಿಸಿ ಮಾತನಾಡುತ ದಾರ್ಶನಿಕರ ಜಯಂತಿಗಳ ಆಚರಣೆ ನಮ್ಮಲ್ಲಿ ಸದ್ಭಾವ ತಂದು ಸತ್ಪ್ರೇರಣೆ ಮೂಡಿಸುತ್ತವೆ. ಬುದ್ದ ಬಸವ ಅಂಬೇಡ್ಕರ್ ತತ್ವಗಳು ನಮ್ಮ ಬದುಕಿನ ಭಾಗವಾಆಗ ಮಾತ್ರ ಜಯಂತಿಗಳಿಗೆ ಅರ್ಥ ಬರುತ್ತದೆ. ಆ ದಿಶೆಯಲ್ಲಿ ಎಲ್ಲರೂ ಪ್ರಯತ್ನಿಸೋಣವೆಂದರು.

ಮಾಜಿ ಎಪಿಎಂಸಿ ಅಧ್ಯಕ್ಷರಾದ ವಿಜಯಕುಮಾರ ಆನಂದೆ, ಖ್ಯಾತ ಉದ್ಯಮಿ ಶಾಮರಾವ ಭೀಮರಾವ, ಗುತ್ತಿಗೆದಾರರು ಗುರುನಾಥ ಬಿರಾದಾರ, ತಾಲ್ಲೂಕು ಬಸವಕೇಂದ್ರ ಅಧ್ಯಕ್ಷರಾದ ಸೋಮನಾಥ ಕಂದಗೂಳೆ ಟಿ ಶರಣೆ ಭಾಗ್ಯಶ್ರೀ ಮುದ್ದಾ ಅಧ್ಯಕ್ಷರು ಮಹಿಳಾ ಬಸವಕೇಂದ್ರ ನಗರ ಘಟಕ ಬೀದರ ಶರಣೆ ಅಶ್ವಿನಿ ರಾಜಕುಮಾರ ಹಿರೇಮಠ ಬಸವಕೇಂದ್ರ ಬೀದರ ಕರುಣಾ ಶಟಕಾರ ಪಂಪಾವತಿ ಪಾಟೀಲ, ವಿದ್ಯಾವತಿ ಬಲ್ಲೂರ, ರಾಜಮ್ಮ ಚಿಕಪೇಟ್, ವಿರೂಪಾಕ್ಷ ದೇವರು ಹಾಗೂ ರೇವಣಪ್ಪ ಮೂಲಗೆ ಮೊದಲಾದವರು ವಚನ ಪ್ರಾರ್ಥನೆ ನಡೆಸಿಕೊಟ್ಟರೆ, ಅಶ್ವಿನಿ ರಾಜಕುಮಾರ ಹಿರೇಮಠ ಸಂಗೀತ ನಡೆಸಿಕೊಟ್ಟರು ಬೀದರ ತಾಲ್ಲೂಕು ಕಸಾಪ ಅಧ್ಯಕ್ಷ ಟಿ. ಎಮ್ ಮಚ್ಚೆ ನಿರೂಪಿಸಿದರೆ, ಇಂಜಿನಿಯರ್ ಗಣೇಶ ಶೀಲವಂತ ವಂದಿಸಿದರು. ಜಗನ್ನಾಥ ಶಿವಯೋಗಿ ಸ್ವಾಗತಿಸಿದರು.

# ಮಹಾಸಾಧ್ವಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ 604 ನೇ ಜಯಂತಿ



ಧೈರ್ಯದ ದಾರಿ

**ಮಾನ್ವಿ:**ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಮಹಾಸಾಧ್ವಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ 604 ನೇ ಜಯಂತಿ ಕಾರ್ಯಕ್ರಮವನ್ನು ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಉಪತಹಸೀಲ್ದಾರ್ ವಿರುಪಣ್ಣ ಆಚರಿಸಿದರು.

ಶಿಕ್ಷಕ ವಿಜಯಕುಮಾರ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ ಜೀವನ ಕುರಿತು ಉಪನ್ಯಾಸ ನೀಡಿ 15ರಿಂದ 16 ನೇ ಶತಮಾನದಲ್ಲಿ ಬಾಳಿದ ಮಹಾಸಾಧ್ವಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರು ಸಂಸಾರದಲ್ಲಿದು ಕೊಂಡು ಶಿವನಲ್ಲಿ ಆಚಲವಾದ ಭಕ್ತಿಯನ್ನು ಹೊಂದಿ ಜೀವನದಲ್ಲಿ ತಾಳ್ಮೆ,ಸಹಾನೆ,ಸಹಾಬಾಳ್ವೆ ಯಿಂದ ಕುಟುಂಬದಲ್ಲಿನ ಎಲ್ಲಾ ಸದಸ್ಯರನ್ನು ಸರಿದಾರಿಯನ್ನು ತೋರಿದವರು. ಮೈದುನ ವೇಮನನಿಗೆ ಸನ್ಮಾರ್ಗವನ್ನು ತೋರಿ ಮಹಾಯೋಗಿಯನ್ನಾಗಿ ಮಾಡಿದವರು ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಅವರ ಅದರ್ಶವನ್ನು ,ಶಿವಭಕ್ತಿಯನ್ನು ಪ್ರತಿಯೊಬ್ಬರು ಕೂಡ ಅನುಸರಿಸುವ ಮೂಲಕ ಉತ್ತಮ ಜೀವನ ನಡೆಸಬಹುದು ಎಂದು ತಿಳಿಸಿದರು.

10 ನೇ ತರಗತಿಯಲ್ಲಿ ಉತ್ತಮ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಶೀರಸ್ಥೆದಾರರಾದ ವಿನಾಯಕರಾವ್, ರೆಡ್ಡಿ ಸಮಾಜದ ತಾ.ಅಧ್ಯಕ್ಷರಾದ ಅಮರೇಗೌಡ, ತಾಲೂಕು ಆರೋಗ್ಯಧಿಕಾರಿ ಡಾ.ಶರಣಬಸವರಾಜ, ತಾಲೂಕು ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷರಾದ ಹರಿಹರಪಾಟೀಲ್,ಗೌರವ ಅಧ್ಯಕ್ಷರಾದ ಶ್ರೀಧರಸ್ವಾಮಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾ.ಅಧ್ಯಕ್ಷರಾದ ಅರುಣಕುಮಾರಚಂದಾ,ತಿಮ್ಮರೆಡ್ಡಿ ಭೋಗವತಿ,ಶರಣೆಗೌಡ ನಕ್ಕುಂದಿ,ಸಿದ್ದಲಿಂಗಪ್ಪ ವಕೀಲರು,ಗುರುಸಿದ್ದಪ್ಪ ಕಣ್ಣೂರು ಸೇರಿದಂತೆ ಇನ್ನಿತರರು ಇದ್ದರು.

# ಸೇತುವೆ ಮೇಲಿಂದ ಜಿಗಿದು ಯುವಕ ಆತ್ಮಹತ್ಯೆ



**ಕಲಬುರಗಿ,ಮೇ.11**–ಸೇತುವೆ ಮೇಲಿಂದ ಜಿಗಿದು ಯುವಕನೋರ್ವ ಆತ್ಮಹತ್ಯೆ ಮಾಡಿಕೊಂಡ ಘಟನೆ ಕಮಲಾಪುರ ತಾಲೂಕಿನ ಕುರಿಕೋಟಾ ಗ್ರಾಮದ ಸಮೀಪ ನಡೆದಿದೆ.
ಶಹಾಬಾದ್ ತಾಲೂಕಿನ ನಂದೂರು ಗ್ರಾಮದ ಅಮರನಾಥ ನಿಂಗಣ್ಣ ದೊಡ್ಡಮನಿ (30) ಆತ್ಮಹತ್ಯೆ ಮಾಡಿಕೊಂಡ ಯುವಕ ಎಂದು ಗುರುತಿಸಲಾಗಿದೆ.

ಶುಕ್ರವಾರ ಸಂಜೆ ಮನೆಯಿಂದ ಹೊರಟು ಹೋದ ಅಮರನಾಥ, ಕುರಿಕೋಟಾ ಸೇತುವೆ ಬಳಿ ತನ್ನ ದ್ವಿಚಕ್ರ ವಾಹನ ನಿಲ್ಲಿಸಿ ಸೇತುವೆಯಿಂದ ಜಿಗಿದಿರುವುದನ್ನು ಸ್ಥಳೀಯರು ಗಮನಿಸಿದ್ದರು ಎನ್ನಲಾಗಿದೆ.
ಶನಿವಾರ ಬೆಳಗ್ಗೆಯಿಂದ ಅಗ್ನಿಶಾಮಕ ದಳದ ಸಿಬ್ಬಂದಿ ಹುಡುಕಾಟ ಆರಂಭಿಸಿದ್ದು, ಭಾನುವಾರ ಮಧ್ಯಾಹ್ನ ಮೃತದೇಹ ಪತ್ತೆಯಾಗಿದೆ.

ಘಟನಾ ಸ್ಥಳಕ್ಕೆ ಕಮಲಾಪುರ ಸಿಪಿಐ ಶಿವಶಂಕರ ಸಾಹು, ಮಹಾಗಾಂವ್ ಪಿಎಸ್ಐ ಬಸವರಾಜ್ ಚಿತ್ತಕೋಟೆ ಹಾಗೂ ವಿಶ್ವನಾಥ್ ಬಾಕಳೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಕುರಿತು ಮಹಾಗಾಂವ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಒನ್ ಕೇಸ್ ಒನ್ ಡೇಟಾ' ಡಿಜಿಟಲ್ ವೇದಿಕೆ ಪ್ರಾರಂಭ



**ನವದೆಹಲಿ,ಮೇ.11**– ನ್ಯಾಯಾಂಗ ವ್ಯವಸ್ಥೆಯನ್ನು ಹೆಚ್ಚು ತಂತ್ರಜ್ಞಾನ-ಸಕ್ರಿಯಗೊಳಿಸುವ ನಿಟ್ಟಿನಲ್ಲಿ ಸುಪ್ರೀಂ ಕೋರ್ಟ್ ಒಂದು ಪ್ರಮುಖ ಹೆಜ್ಜೆ ಇಟ್ಟಿದೆ.ದೇಶದ ನ್ಯಾಯಾಂಗದಲ್ಲಿ ಮಾಹಿತಿಯ ಏಕೀಕರಣವನ್ನು ಸುವ್ಯವಸ್ಥಿತಗೊಳಿಸುವ ಮತ್ತು ದೇಶಾದ್ಯಂತ ನ್ಯಾಯಾಂಗ ಸೇವೆಗಳಿಗೆ ಸಾರ್ವಜನಿಕ ಪ್ರವೇಶವನ್ನು ಸುಧಾರಿಸುವ ಗುರಿಯೊಂದಿಗೆ ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ 'ಒನ್ ಕೇಸ್ ಒನ್ ಡೇಟಾ' ಮತ್ತು 'ಸು ಸಹಾಯ್' ಎಂಬ ಡಿಜಿಟಲ್ ಉಪಕ್ರಮಗಳನ್ನು ಘೋಷಿಸಿದ್ದಾರೆ.

ಸುಪ್ರೀಂ ಕೋರ್ಟ್ ವಿಚಾರಣೆಯ ಆರಂಭದಲ್ಲಿ ಈ ಘೋಷಣೆ ಮಾಡಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, 'ಒನ್ ಕೇಸ್ ಒನ್ ಡೇಟಾ' ಎಲ್ಲಾ ಹೈಕೋರ್ಟ್‌ಗಳು, ಜಿಲ್ಲಾ ನ್ಯಾಯಾಲಯಗಳು ಮತ್ತು ತಾಲೂಕು ನ್ಯಾಯಾಲಯಗಳಿಂದ ಬಹು-ಪದರದ ಮಾಹಿತಿಯನ್ನು ಒಂದೇ ಸಂಯೋಜಿತ ವ್ಯವಸ್ಥೆಯಲ್ಲಿ ಕ್ರೋಢೀಕರಿಸುತ್ತದೆ ಎಂದು ಹೇಳಿದ್ದಾರೆ.
ದೇಶದ ನ್ಯಾಯಾಲಯಗಳಾದ್ಯಂತ ಹೆಚ್ಚು ಸಮಗ್ರ ಮತ್ತು ಪರಸ್ಪರ ಸಂಪರ್ಕಿತ ಡಿಜಿಟಲ್ ಡೇಟಾಬೇಸ್ ರಚಿಸುವ ಮೂಲಕ ಸುಲಭ ಮತ್ತು ಪರಿಣಾಮಕಾರಿ ಪ್ರಕರಣ ನಿರ್ವಹಣೆಗಾಗಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು ಈ ಉಪಕ್ರಮದ ಗುರಿಯಾಗಿದೆ.

ಸುಪ್ರೀಂ ಕೋರ್ಟ್ ವೆಬ್‌ಸೈಟ್‌ಗೆ ಲಿಂಕ್ ಮಾಡಲಾದ ಎಐ-ಚಾಲಿತ 'ಸು ಸಹಾಯ್' ಚಾಟ್‌ಬಾಟ್ ಪ್ರಾರಂಭಿಸುವುದಾಗಿ ಮುಖ್ಯ ನ್ಯಾಯಮೂರ್ತಿ ಘೋಷಿಸಿದ್ದಾರೆ.
ಸುಪ್ರೀಂ ಕೋರ್ಟ್ ರಿಜಿಸ್ಟ್ರಿಯ ಸಹಯೋಗದೊಂದಿಗೆ ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್‌ಐಸಿ) ಈ ಚಾಟ್‌ಬಾಟ್ ಅಭಿವೃದ್ಧಿಪಡಿಸಿದೆ.

ಇದು ದಾವೆದಾರರು ನ್ಯಾಯಾಂಗ ಮತ್ತು ನ್ಯಾಯಾಲಯಕ್ಕೆ ಸಂಬಂಧಿಸಿದ ಸೇವೆಗಳನ್ನು ಸುಲಭವಾಗಿ ಪ್ರವೇಶಿಸಲು ಸುಲಭಗೊಳಿಸುತ್ತದೆ."ಇದು ನಾಗರಿಕರಿಗೆ ಅಗತ್ಯ ಸೇವೆಗಳು, ಮಾರ್ಗಸೂಚಿಗಳು ಮತ್ತು ಸುಪ್ರೀಂ ಕೋರ್ಟ್ ನಿರ್ದೇಶನಗಳನ್ನು ಪ್ರವೇಶಿಸಲು ಸರಳ ಮತ್ತು ಅನುಕೂಲಕರ ಇಂಟರ್ಫೇಸ್ ಒದಗಿಸುತ್ತದೆ" ಎಂದು ಸೂರ್ಯಕಾಂತ್ ಹೇಳಿದ್ದಾರೆ. ಈ ಡಿಜಿಟಲ್ ಉಪಕ್ರಮಗಳಿಗಾಗಿ ಮುಖ್ಯ ನ್ಯಾಯಾಧೀಶರು ನೋಂದಾವಣೆ ಅಧಿಕಾರಿಗಳು ಮತ್ತು ಬಾರ್ ಸದಸ್ಯರಿಗೆ ಧನ್ಯವಾದಗಳನ್ನು ಅರ್ಪಿಸಿದ್ದಾರೆ.

# ಮಹಿಳಾ ಶಕ್ತಿಯ ಪ್ರತಿರೂಪ ಹೇಮರೆಡ್ಡಿ ಮಲ್ಲಮ್ಮ : ಚವ್ಹಾಣ



**ಔರಾದ್ :ಮೇ.11:** ಮಹಾಸಾಧ್ವಿ, ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿಯ ಅಂಗವಾಗಿ ಪಟ್ಟಣದ ಶಾಸಕರ ಕಚೇರಿಯಲ್ಲಿ ಶಾಸಕ ಪ್ರಭು ಬಿ. ಚವ್ಹಾಣ ಅವರು ಹೇಮರೆಡ್ಡಿ ಮಲ್ಲಮ್ಮ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಮರ್ಪಿಸಿದರು.ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ಹೇಮರೆಡ್ಡಿ ಮಲ್ಲಮ್ಮ ಅವರು ಭಕ್ತಿ, ತ್ಯಾಗ, ಸತ್ಯನಿಷ್ಠೆ ಹಾಗೂ ಸಮಾಜ ಸೇವೆಯ ಪ್ರತೀಕವಾಗಿದ್ದರು. ಸಮಾಜಕ್ಕೆ ಸನ್ಮಾರ್ಗದ ಸಂದೇಶ ಸಾರಿದ ಅವರು ಮಹಿಳಾ ಶಕ್ತಿಯ ಆದರ್ಶ ಪ್ರತಿರೂಪರಾಗಿದ್ದಾರೆ ಎಂದು ಹೇಳಿದರು.ಹೇಮರೆಡ್ಡಿ ಮಲ್ಲಮ್ಮ ಅವರು ತಮ್ಮ ಜೀವನದ ಮೂಲಕ ಸಮಾನತೆ, ಮಾನವೀಯತೆ ಹಾಗೂ ಕಾಯಕದ ಮಹತ್ವವನ್ನು ಸಾರಿದ್ದು, ಧರ್ಮ ಮತ್ತು ಸಂಸ್ಕೃತಿಯ ಉಳಿವಿಗಾಗಿ ಮಹತ್ವದ ಕೊಡುಗೆ ನೀಡಿದ್ದಾರೆ. ಅವರ ಆದರ್ಶಗಳು ಇಂದಿನ ಯುವಜನತೆಗೆ ಪ್ರೇರಣೆಯಾಗಿದ್ದು, ಸಮಾಜದಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸುವಲ್ಲಿ ಅವರ ಸಂದೇಶಗಳು ಮಾರ್ಗದರ್ಶಕವಾಗಿವೆ ಎಂದು ತಿಳಿಸಿದರು.
ಈ ಸಂದರ್ಭದಲ್ಲಿ ಮುಖಂಡರಾದ ರಾಮಶೆಟ್ಟಿ ಪನ್ನಾಳೆ, ಶಿವರಾಜ ಅಲ್ಮಾಜೆ, ಪ್ರದೀಪ ಪವಾರ, ಪ್ರಕಾಶ ಭಂಗಾರೆ, ಮಂಜು ಸ್ವಾಮಿ, ಬಾಲಾಜಿ ವಾಗ್ಮಾರೆ, ಲಕ್ಷ್ಮಣ ಜಾಧವ, ಸಂದೀಪ ಟಿಳೇಕರ್, ಕೇರಬಾ ಪವಾರ, ಸಂತೋಷ ಪೊಷಕಲವಾರ ಸೇರಿದಂತೆ ಹಲವರು ಹೇಮರೆಡ್ಡಿ ಮಲ್ಲಮ್ಮ ಅವರ ಭಾವಚಿತ್ರಕ್ಕೆ ಪುಷ್ಪಮನ ಸಲ್ಲಿಸಿದರು.

# ಶುದ್ಧ ಕುಡಿಯುವ ನೀರು ಪೂರೈಕೆಗೆ ಆಗ್ರಹಿಸಿ ಪ್ರತಿಭಟನೆ

**ಕಲಬುರಗಿ,ಮೇ.11**–ನಗರ ಮತ್ತು ಜಿಲ್ಲೆಯ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಕೆ ಮಾಡುವಂತೆ ಆಗ್ರಹಿಸಿ ಭಾರತ ಕಮ್ಯೂನಿಸ್ಟ್ ಪಕ್ಷ (ಸಿಪಿಐ) ಜಿಲ್ಲಾ ಮಂಡಳಿ ನೇತೃತ್ವದಲ್ಲಿ ಮಹಾನಗರ ಪಾಲಿಕೆ ಮುಂದೆ ಇಂದು ಪ್ರತಿಭಟನೆ ನಡೆಸಿ ಮಹಾನಗರ ಪಾಲಿಕೆ ಆಯುಕ್ತರ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು.
ಪಕ್ಷದ ಜಿಲ್ಲಾ ಕಾರ್ಯದರ್ಶಿ ಡಾ.ಮಹೇಶಕುಮಾರ ರಾಠೋಡ್, ಪ್ರಭುದೇವ ಯಳಸಂಗಿ, ಭೀಮಾಶಂಕರ ಮಾಡಿಯಾಳ್, ಪದ್ಮಾವತಿ ಪಾಟೀಲ, ಸಾಜೀದ್ ಅಹಮದ್, ಶಿವಲಿಂಗಮ್ಮ ಲೇಂಗಟಿಕರ್, ಜಗದೇವಿ ಕುಂಬಾರ, ಉಷಾ ಭಜಂತ್ರಿ, ವಿಜಯಲಕ್ಷ್ಮೀ ಬೆಣ್ಣೂರ, ಅಸ್ಮಿತಾ ರಾಠೋಡ್, ಅರುಣಾ, ಪ್ರಭಾವತಿ ಆಲಮೇಲ್, ಕೋಕಿಲಾ, ಜ್ಯೋತಿ ಶಕಾಪೂರ, ಸುಷ್ಮಿತಾ ಸಜ್ಜನ್, ಪೂನಂ ಠಾಕೂರ, ದಾನೇಶ್ವರಿ ಮಠ, ಸುಜಾತಾ ಪಾಟೀಲ, ಶಾಲಿನಿ ಅನೀಲಕುಮಾರ, ಜಗದೇವಿ ಹೆಗ್ಡೆ, ಶ್ರೀದೇವಿ ನೆಲೋಗಿ ಸೇರಿದಂತೆ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.




# ಸಂಗೀತ ಎಂದರೆ ಅದು ವಿಶ್ವದ ಭಾಷೆ



**ಕಲಬುರಗಿ,ಮೇ.11**–ಶರಣ ಸಿರಸಗಿಯ ಶರಣಬಸವೇಶ್ವರ ಮಹಾಮನೆಯಲ್ಲಿ ಭಾನುವಾರ ಪಂ.ಪುಟ್ಟರಾಜ ಗವಾಯಿಗಳ ಸಾಂಸ್ಕೃತಿಕ ಹಾಗೂ ಶಿಕ್ಷಣ ಸೇವಾ ಟ್ರಸ್ಟ್ ಜೇವರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.
ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ವೇ. ಸಿದ್ದಯ್ಯ ಶಿವಲಿಂಗಯ್ಯ ಹಿರೇಮಠ ಮಾತನಾಡಿ ಸಂಗೀತ ಒಂದು ಕೇವಲ ಒಂದು ದೇಶಕ್ಕೆ ಸೀಮಿತವಲ್ಲ ಅದು ವಿಶ್ವದ ಭಾಷೆ, ಯಾವ ದೇಶ ಸುತ್ತಿದರು ಸಂಗೀತಕ್ಕೆ ಒಂದೇ ಇರುತ್ತದೆ, ಈ ಸಂಸ್ಥೆಯು ಪ್ರತಿ ವರುಷ ಸಂಗೀತ ಸಮ್ಮೇಳನವನ್ನು ಹಮ್ಮಿಕೊಂಡು ಬಹಳ ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದಾರೆ. ನಮ್ಮ ಶರಣ ಶಿರಸಿಗಿ ಗ್ರಾಮದಲ್ಲಿ ಇಂತ ಸಂಗೀತ ಹಮ್ಮಿಕೊಂಡಿದ್ದು ನಮ್ಮೆಲ್ಲರ ಭಾಗ್ಯವೆಂದು ತಿಳಿಸಿದರು.

ಉದ್ಘಾಟಕರಾಗಿ ಆಗಮಿಸಿದ್ದ ಶರಣಗೌಡ ಉಮರಾವ ಪೊಲೀಸ್ ಪಾಟೀಲ ಮಾತನಾಡಿ ಭಾರತದಲ್ಲಿ ಸಂಗೀತ ಕ್ಷೇತ್ರದಲ್ಲಿ ಹಲವಾರು ದಿಗ್ಗಜರನ್ನು ನಾವು ಕಂಡಿದ್ದೇವೆ ಅದರಲ್ಲಿ ನಮ್ಮ ಕರ್ನಾಟಕದಲ್ಲಿ ಪಂ ಪುಟ್ಟರಾಜ ಗವಾಯಿಗಳು ಹುಟ್ಟುಹಾಕಿದ ಮರದ ಬಳ್ಳಿಗಳು ನಮ್ಮ ಸಂಗೀತ ಕಲಾವಿದರು, ಅವರ ನಿಸ್ವಾರ್ಥ ಸೇವೆಯಿಂದ ಎಷ್ಟೋ ಜನ ಇವತ್ತು ಕಲಾವಿದರಾಗಿ ಅವರ ಜೀವನವನ್ನು ನಡೆಸುತ್ತಿದ್ದಾರೆ, ಗವಾಯಿಗಳು ಕೇವಲ ಸಂಗೀತ ವಲ್ಲದೆ ಹಲವಾರು ಶರಣ ಪುರಾಣ ಪ್ರವಚನವನ್ನು ಬರೆದಿದ್ದಾರೆ ಅದರಲ್ಲಿ ನಮ್ಮ ಕಲಬುರಗಿ ಶರಬಸವೇಶ್ವರರ ಪುರಾಣವು ಒಂದಾಗಿರುತ್ತೆ ಎಂದು ಬಹಳ ಚೆನ್ನಾಗಿ ಮಾತನಾಡಿದರು. ಶರಣಬಸಪ್ಪ ಬಸವನಪ್ಪ ಪಟ್ಟಣಕರ, ಅಂಬಾರಿಯ ಶಿವಶರಣಪ್ಪ ಹಂಗರಗಿ, ಶರಣಬಸಪ್ಪ ಭೀಮಾಶಂಕರ ಜಮಾದಿಯವರು ಸಂಗೀತ ಕಲಾವಿದರ ಸಿದ್ರಾಮಪ್ಪ ಪೊಲೀಸ್ ಪಾಟೀಲ ಕುಕನೂರು ಅವರು ಮಾತನಾಡಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈರೀತಿ ಧನಸಹಾಯ ನೀಡುತ್ತಿರುವುದರಿಂದ ಕರ್ನಾಟಕ ರಾಜ್ಯದ ಕಲಾವಿದರಿಗೆ ಬಹಳ ಅನುಕೂಲವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಹಿಂದೂಸ್ತಾನಿ ಸಂಗೀತವನ್ನು ಸಿದ್ರಾಮಪ್ಪ ಪೊಲೀಸ್ ಪಾಟೀಲ ಗವಾಯಿಗಳು ಕುಕನೂರು ರವರು ನೀಡಿದರು, ಮಹಾಂತಯ್ಯ ಮಂತಳ ಸುಗಮ ಸಂಗೀತ ನೀಡಿದರು, ಬಾಬುರಾವ ಕೋಬಳ, ಲಕ್ಷ್ಮಿಕಾಂತ ವಿಶ್ವಕರ್ಮ, ಶಿವಶಂಕರ್ ಗೋಬರ್ ತತ್ವಪದ ಸಂಗೀತ ಸೇವೆ ಸಲ್ಲಿಸಿದರು ಹಾಗೂ ಮಹಾಂತೇಶ ಹರವಾಳ, ವಿಶ್ವನಾಥ ಐನೊಳ್ಳಿ ತಬಲಾ ಸಾಥ್ ನೀಡಿದರು ಎಂದು ಸಂಸ್ಥೆಯ ಕಾರ್ಯದರ್ಶಿಗಳಾದ ಶಿವಾನಂದ ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಎಸ್‌ಐಆರ್‌ನಿಂದ ಬಂಗಾಳದಲ್ಲಿ ಬಿಜೆಪಿ ಗೆಲುವು

**ನವದೆಹಲಿ,ಮೇ.11**–ಪಶ್ಚಿಮ ಬಂಗಾಳದಲ್ಲಿ ಭಾರತೀಯ ಜನತಾ ಪಕ್ಷ (ಬಿಜೆಪಿ) ನೇತೃತ್ವದ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಆದರೆ, ಚುನಾವಣಾ ಫಲಿತಾಂಶಗಳ ಬಗ್ಗೆ ಇನ್ನೂ ಪ್ರಶ್ನೆಗಳು ಎದ್ದಿವೆ.



ಇದೀಗ ಕಾಂಗ್ರೆಸ್ ಸಂಸದ ಶಶಿ ತರೂರ್ ಅವರು ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಬಗ್ಗೆ ಪ್ರಶ್ನೆಗಳನ್ನು ಎತ್ತಿದ್ದಾರೆ. ಪಶ್ಚಿಮ ಬಂಗಾಳದ ಚುನಾವಣಾ ಪ್ರಕ್ರಿಯೆಯನ್ನು ಅವರು ಕಟುವಾಗಿ ಪ್ರಶ್ನಿಸಿದ್ದಾರೆ. ಮತದಾರರ ಪಟ್ಟಿಯಿಂದ ಹೆಸರುಗಳನ್ನು ಅಳಿಸಿಹಾಕಿದ್ದರಿಂದ ಬಿಜೆಪಿಗೆ ಲಾಭವಾಗಿದೆ ಎಂದು ತರೂರ್ ಹೇಳಿದ್ದಾರೆ. ಕೇರಳದಲ್ಲಿ ಕಾಂಗ್ರೆಸ್ ಕೂಡ ಲಾಭ ಪಡೆದಿದೆ ಎಂದಿದ್ದಾರೆ.

ಮತದಾರರ ಪಟ್ಟಿಯಿಂದ ಹೆಸರುಗಳನ್ನು ಬೃಹತ್ ಪ್ರಮಾಣದಲ್ಲಿ ಅಳಿಸಿಹಾಕುವುದು ಮತ್ತು ಮೇಲ್ಮನವಿಗಳನ್ನು ಪರಿಶೀಲಿಸುವಲ್ಲಿನ ವಿಳಂಬವು ರಾಜ್ಯದ ಚುನಾವಣಾ ಫಲಿತಾಂಶಗಳ ಮೇಲೆ ನಿರ್ಣಾಯಕ ಪರಿಣಾಮ ಬೀರಬಹುದು ಎಂದು ಅವರು ಹೇಳಿದ್ದಾರೆ.ಎಸ್‌ಐಆರ್ ಮತದಾರರ ಪಟ್ಟಿ ಉಲ್ಲೇಖಿಸಿ, ಸುಮಾರು 9.1 ಮಿಲಿಯನ್ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ ಈ ಮಧ್ಯೆ ಸುಮಾರು 3.4 ಮಿಲಿಯನ್ ವ್ಯಕ್ತಿಗಳು ತಾವು ನಿಜವಾದ ಮತದಾರರು ಎಂದು ಹೇಳಿಕೊಂಡು ಮೇಲ್ಮನವಿ ಸಲ್ಲಿಸಿದ್ದಾರೆ ಎಂದಿದ್ದಾರೆ.
ಬಂಗಾಳದಲ್ಲಿ 91 ಲಕ್ಷ ಮತದಾರರನ್ನು ತೆಗೆದುಹಾಕಲಾಗಿದೆ ಎಂದು ತರೂರ್ ಹೇಳಿದರು.

ಆ ಪೈಕಿ, 3.4 ಮಿಲಿಯನ್ ಜೀವಂತ ವ್ಯಕ್ತಿಗಳು ತಾವು ಜೀವಂತವಾಗಿದ್ದೇವೆ ಮತ್ತು ಮತದಾನದ ಎಲ್ಲಾ ಹಕ್ಕನ್ನು ಹೊಂದಿದ್ದೇವೆ ಎಂದು ಮೇಲ್ಮನವಿ ಸಲ್ಲಿಸಿದ್ದಾರೆ.

ನಿಯಮಗಳ ಪ್ರಕಾರ, ಪ್ರತಿಯೊಂದು ಪ್ರಕರಣವನ್ನು ಪ್ರತ್ಯೇಕವಾಗಿ ಪರಿಹರಿಸಬೇಕು, ಆದ್ದರಿಂದ ಚುನಾವಣೆಗೆ ಮುನ್ನ ಕೆಲವು ನೂರು ಪ್ರಕರಣಗಳನ್ನು ಮಾತ್ರ ಇತ್ಯರ್ಥಪಡಿಸಲಾಗಿದೆ. ಇಲ್ಲಿಯವರೆಗೆ, ವಿಚಾರಣೆ ನಡೆಯುತ್ತಿರುವಾಗ ಮುಂಬರುವ ವರ್ಷಗಳಲ್ಲಿ ಸುಮಾರು 3.1-3.2 ಮಿಲಿಯನ್ ಜನರು ಮಾನ್ಯ ಮತದಾರರಾಗಿದ್ದಾರೆ ಎಂದು ಕಂಡುಬರುತ್ತದೆ, ಆದರೆ ಅವರು ಮತ ಚಲಾಯಿಸುವ ಅವಕಾಶವನ್ನು ಕಳೆದುಕೊಂಡಿದ್ದಾರೆ ಎಂದಿದ್ದಾರೆ.

ಈ ಪ್ರಕರಣಗಳಲ್ಲಿ ಕೆಲವೇ ಕೆಲವು ಪ್ರಕರಣಗಳು ಚುನಾವಣೆಗೆ ಮುನ್ನ ಇತ್ಯರ್ಥವಾಗಿದ್ದು, ಹೆಚ್ಚಿನವು ಮತದಾನದ ವೇಳೆಗೆ ಬಗೆಹರಿಯದೆ ಉಳಿದಿವೆ ಎಂದು ತರೂರ್ ಹೇಳಿದ್ದಾರೆ.

ನಾನು ಎಸ್‌ಐಆರ್ ಬಗ್ಗೆ ಹೇಳಿರುವುದು ಉತ್ತರಿಸಬೇಕಾದ ಒಂದು ಕಾನೂನುಬದ್ಧ ಪ್ರಶ್ನೆಯಾಗಿದೆ. ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಉತ್ತರಿಸಬೇಕು ಎಂದಿದ್ದಾರೆ.
ಅಂಕಿಅಂಶಗಳನ್ನು ಉಲ್ಲೇಖಿಸಿ, ಶಶಿ ತರೂರ್, ಬಿಜೆಪಿಯ ಗೆಲುವಿನ ಅಂತರ ಸುಮಾರು 3 ಮಿಲಿಯನ್ ಮತಗಳಷ್ಟಿತ್ತು ಎಂದು ಹೇಳಿ ಇದು ಬಾಕಿ ಇರುವ ಮತದಾರರ ಮೇಲ್ಮನವಿಗಳ ಸಂಖ್ಯೆಗೆ ನಿಕಟವಾಗಿ ಹೊಂದಿಕೆಯಾಗುತ್ತದೆ, ಅರ್ಹ ಮತದಾರರು ನಿಜವಾಗಿಯೂ ತಮ್ಮ ಮತಗಳನ್ನು ಚಲಾಯಿಸಲು ವಿಫಲರಾಗಿದ್ದಾರೆಯೇ ಎಂಬ ಪ್ರಶ್ನೆಯನ್ನು ಹುಟ್ಟುಹಾಕುತ್ತದೆ ಎಂದು ಹೇಳಿದ್ದಾರೆ.

ಬಂಗಾಳದಲ್ಲಿ ಬಿಜೆಪಿ 3 ಮಿಲಿಯನ್ ಮತಗಳ ಅಂತರದಿಂದ ಗೆದ್ದಿದೆ.ಇದು ಸಂಪೂರ್ಣವಾಗಿ ನ್ಯಾಯಯುತ ಮತ್ತು ಪ್ರಜಾಪ್ರಭುತ್ವವೇ? ಎಂದು ಪ್ರಶ್ನಿಸಿದ್ದಾರೆ. ನಕಲಿ ಅಥವಾ ವಲಸೆ ಮತದಾರರ ಹೆಸರುಗಳನ್ನು ತೆಗೆದುಹಾಕುವುದರಲ್ಲಿ ತಮಗೆ ಯಾವುದೇ ಸಮಸ್ಯೆ ಇಲ್ಲ ಎಂದು ಶಶಿ ತರೂರ್ ಹೇಳಿದ್ದಾರೆ.

# ಭೂಪಾಲ್ ಮಂಜುನಾಥ ಸೇರಿ ಆರು ಜನರಿಗೆ ಲಿಂಗಾಯತ ರೆಡ್ಡಿ ಸಮಾಜದ ಗೌರವ ಸನ್ಮಾನ

**ಬಳ್ಳಾರಿ:ಮೇ,11**– ನಗರದ ಬಸವ ಭವನದಲ್ಲಿ ನಿನ್ನೆ ಸಂಜೆ ವೀರಶೈವ ಲಿಂಗಾಯತ ರೆಡ್ಡಿ ಸಮಾಜದಿಂದ ಹಮ್ಮಿಕೊಂಡಿದ್ದ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ 604 ನೇ ಜಯಂತಿ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಗಣ್ಯರನ್ನು ಸನ್ಮಾನಿಸಲಾಯ್ತು.

ಶೈಕ್ಷಣಿಕ ಕ್ಷೇತ್ರದ ಸೇವೆಗಾಗಿ ಕಿಷ್ಕಿಂದ ವಿಶ್ವ ವಿದ್ಯಾಲಯದ ಕಲಾಧಿಪತಿ ಡಾ.ಯಶವಂತ ಭೂಪಾಲ್. ಸಾಮಾಜಿಕ ಸೇವೆಗಾಗಿ ಸಂಗನಕಲ್ಲು ಬಸವರಾಜ್. ವೈದ್ಯಕೀಯ ಕ್ಷೇತ್ರದ ಸೇವೆಗಾಗಿ ಬಳ್ಳಾರಿ ಮೆಡಿಕಲ್ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಡಾ. ಎನ್. ಮಂಜುನಾಥ. ನ್ಯಾಯಾಂಗ ಕ್ಷೇತ್ರದ ಸೇವೆಗಾಗಿ ಮಾಜಿ ಮೇಯರ್ ಪಾರ್ವತಿ ಇಂದುಶೇಖರ್.



ಸಾವಯವ ಕೃಷಿಗಾಗಿ ಸಿಂದವಾಳ ಕೇಶವರಡ್ಡಿ ಮತ್ತು ಮಾಧ್ಯಮ ಕ್ಷೇತ್ರದ ಸೇವೆಗಾಗಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಅಧ್ಯಕ್ಷ ನಡವಿ ವೀರಭದ್ರಗೌಡ ಅವರನ್ನು ಸಮಾಜದ ಅಧ್ಯಕ್ಷ ಡಾ.ಎಸ್.ಜೆ.ವಿ.ಮಹಿಪಾಲ್, ಮುಖಂಡರಾದ ಉಡೇದ ಬಸವರಾಜ್,ಸಂಗನಕಲ್ಲು ಹಿಂಮತರಾಜ್, ಜಾನೆಕುಂಟೆ ನೇಪಾಕ್ಷಪ್ಪ, ನೆಲ್ಲುಡಿ ಅಯ್ಯಪ್ಪ, ಸುರೇಖ ಮಲ್ಲನಗೌಡ, ಡಾ.ರೇಣುಕಾ ಮಂಜುನಾಥ, ಡಾ.ಭಾಗ್ಯಲಕ್ಷ್ಮಿ, ಸುಮಂಗಳಮ್ಮ ಬಸವರಾಜ್, ಸುಮಾರೆಡ್ಡಿ ಮೊದಲಾದವರು ಸನ್ಮಾನಿಸಿ ಗೌರವಿಸಿದರು. ಡಾ.ಬಸವರಾಜ್ ಗದಗಿನ, ಮಿಂಚೇರಿ ನರೇಂದ್ರಬಾಬು, ಸನ್ಮಾನಿತರನ್ನು ಪರಿಚಯಿಸಿದರು

